**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ ಸಿ ನಂಃ427-2021</u>**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಕೆ ಸತ್ಯನಾರಾಯಣ | ಸಿ.ಡಬ್ಲ್ಯು | 1 |
| ತಂದೆಯ ಹೆಸರು | ಃ ಸಿ.ವಿ ಕೃಷ್ಣ | ಪಿ.ಡಬ್ಲ್ಯು | 3 |
| ವಯಸ್ಸು | ಃ 59 ವರ್ಷ | | |
| ಉದ್ಯೋಗ | ಃ ವೃತ್ತ ನಿರೀಕ್ಷಕರು ಆಲ್ದೂರು ವೃತ್ತ | | |
| ವಾಸ ಸ್ಥಳ | ಃ ಆಲ್ದೂರು | | |

**ದಿನಾಂಕಃ 24-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನಾನು 2018 ರಿಂದ 2021 ರ ಮದ್ಯದಲ್ಲಿ ಡಿ ಸಿ ಐ  ಬಿ ಘಟಕ ಚಿಕ್ಕಮಗಳೂರಿನಲ್ಲಿ ಪೊಲೀಸ್ ನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ. ಚಾ.ಸಾ-4 ರಿಂದ 8 ನನ್ನ ಸಿಬ್ಬಂಧಿಯಾಗಿದ್ದಾರೆ. ದಿಃ16-10-2019 ರಂದು ಸಂಜೆ 6-00 ಗಂಟೆಗೆ ನಾನು ಕತರ್ವ್ಯದ ಮೇಲೆ ಇದ್ದಾಗ  ಮಾಹಿತಿ ಬಂದ ಮೇರೆಗೆ  ತರೀಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಬೇಲೇನಹಳ್ಳಿ ಸಾರ್ವಜನಿಕ ರಸ್ತಯಲ್ಲಿ ಇಬ್ಬರು ಆ ಸಾಮಿಗಳು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಗೊತ್ತಾಯಿತು. ನಾನು 6-15 ಗಂಟೆಗೆ ನನ್ನ ಸಿಬರ್ಮದಿಯಾದ 4 ರಿಂದ 8 ಇವರನ್ನು ಬರಮಾಡಿಕೊಂಡು ಇಲಾಖಾ ವಾಹನದಲ್ಲಿ ಭಾತ್ಮಿ ಬಂದ ಸ್ದಳದ ಕಡೆಗೆ ಹೊರಟೆನು.  7-40 ಗಂಟೆಗೆ ಸ್ದಳದ ಸಮೀಪಕ್ಕೆ ಹೋಗಿ ಚಾ,ಸಾ-2 ಮತ್ತು  3 ಇವರನ್ನು ಕರೆದು ನೋಟೀಸು ಜಾರಿ ಮಾಡಿ ವಿಚಾರ ತಿಳಿಸಿ ಪಂಚರಾಗುವಂತೆ ತಿಳಿಸಿದೆನು.  ನಂತರ 7-45 ಗಂಟೆಗೆ ಸ್ದಳಕ್ಕೆ ತಲುಪಿ ದೂರದಿಂದ ನೋಡಿದಾಗ ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಮದ್ಯ ಮಾರಾಟ ಮಾಡುವುದು ಕಂಡುಬಂತು.  ತಕ್ಕಣ ನಮ್ಮ ಸಿಬ್ಬಂಧಿಯೊಂದಿಗೆ ದಾಳಿ ಮಾಡಿದಾಗ ಒಬ್ಬ ವ್ಯಕ್ತಿ ನಮ್ಮ ಕೈಗೆ ಸಿಕ್ಕನು.  ಆತನ ಹೆಸರು ಉಮೇಶ್ ನಾಯಕ್ ಎಂದು ತಿಳಿಸಿ ಓಡಿಹೋದವನ ಹೆಸರನ್ನು ಗಂಗಾಧರ ನಾಯಕ್ ಎಂದು ತಿಳಿಸಿದನು.  ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ನ 59 ಓ ಸಿ ವಿಸ್ಕಿ  ಟೆಟ್ರಾ ಪ್ಯಾಕೇಟುಗಳ ಇದ್ದವು. ಆತನ ಬಳಿ ಮದ್ಯವನ್ನು ಇಟ್ಟುಕೊಳ್ಳಲು ಅಥವಾ ಮಾರಾಟ ಮಾಡಲು ಯಾವುದೇ ಪರವಾನಗಿ ಇರಲಿಲ್ಲ. ಆತನು ಮದವನ್ನು ಗಂಗಾಧರ ನಾಯಕ ತಂದು ಕೊಟ್ಟಿದ್ದಾನೆ ಎಂದು ಹೇಳಿದ್ದನು.  ಕಾರಣ ಪಂಚನಾಮೆಯ ಮೂಲಕ 7-45 ರಿಂದ 8-45 ರ ಮದ್ಯದಲ್ಲಿ ಮದ್ಯವನ್ನು ಪಂಚನಾಮೆಯ ಮೂಲಕ ವಶಪಡಿಸಿಕೊಂಡು ಸ್ದಳದಲ್ಲಿಯೇ ಪಂಚನಾಮೆ ಬರೆದು ಸಾಕ್ಷಿದಾರರ ಸಹಿ ಪಡೆದುಕೂಂಡಿದ್ದೇನೆ. ನಂತರ ಮಾಲು ಮತ್ತು ಆರೋಪಿತರೊಂದಿಗೆ ತರೀಕೆರೆ ಪೊಲೀಸ್ ಠಾಣೆಗೆ ಹಾಜರಾಗಿ ನನ್ನ ವರದಿ ಮತ್ತು ಮಹಜರ್,  ನೋಟೀಸು , ಮಲುಗಳನ್ನು ಒಪ್ಪಿಸಿ ಸರ್ಕಾರದ ಕಡೆಯಿಂದ ಫಿರ್ಯಾದಿಯನ್ನು ಕೊಟ್ಟಿದ್ದೇನೆ.  ನೋಟೀಸನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು,

ಪಂಚನಾಮೆಯ ಮೇಲೆ ಇರುವ ಸಹಿಯನ್ನು ನಿ.ಪಿ-1(ಸಿ) ಎಂದು, ವರದಿಯನ್ನು ನಿ.ಪಿ-3 ಎಂದು, ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ನೋಡಿ ಗುರುತಿಸುತ್ತೇನೆ. ಮದ್ಯವನ್ನು ಒಟ್ಟಾಗಿ ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಚಿಕ್ಕಮಗಳೂರಿನಿಂದ ತರೀಕೆರೆ 60 ಕಿ.ಮೀ ಅಂತರದಲ್ಲಿ ಇರುತ್ತದೆ. ತರೀಕೆರೆಯಿಂದ ಬೇಲೇನಹಳ್ಳಿ ತಾಂಡ್ಯ 5 ಕಿ.ಮೀ ಇರಬಹುದು. ಪಂಚರನ್ನು ಒಪ್ಪಿಸಲುಕೇವಲ 5 ನಿಮಿಷ ಸಮಯ ಪಡೆದುಕೊಂಡಿದ್ದೇನೆ. ಪಂಚರನ್ನು ಕರೆದುಕೊಂಡ ಸ್ಥಳ ಗುನ್ನಾ ಸ್ಥಳಕ್ಕೆ ಬಹಳ ಹತ್ತಿರದಲ್ಲಿ ಇದೆ. ಖಚಿತವಾಗಿ ಎಷ್ಟು ಅಂತರದಲ್ಲಿ ಜೀಪು ನಿಲ್ಲಿಸಿದ್ದೆವು ಎಂದು ಈಗ ನೆನಪಿಲ್ಲ, ಕತ್ತಲೆ ಇದ್ದ ಕಾರಣ ಸಮೀಪದಲ್ಲಿ ನಿಲ್ಲಿಸಿದ್ದೆವು. 2 ನೇ ಆರೋಪಿ ನಾವು ನಿಂತಿದ್ದ ಸ್ಥಳದಿಂದ ವಿರುದ್ಧ ದಿಕ್ಕಿನಲ್ಲಿ ಓಡಿಹೋಗಿದ್ದಾನೆ ಅದು ಯಾವ ದಿಕ್ಕು ಎಂದು ಹೇಳಲು ಆಗುವುದಿಲ್ಲ. ಕತ್ತಲಾಗಿದ್ದರಿಂದ ಓಡಿಹೋದ ವ್ಯಕ್ತಿ ಯಾವ ಬಣ್ಣದ ಬಟ್ಟೆ ಹಾಕಿದ್ದ ಎಂದು ಹೇಳಲು ಆಗುವುದಿಲ್ಲ. 1 ನೇ ಆರೋಪಿ ತನ್ನ ಬಳಿಯಲ್ಲಿ ಚೀಲವನ್ನು ಇಟ್ಟುಕೊಂಡಿದ್ದ, ಕೈಯಲ್ಲಿ ಹಿಡಿದುಕೊಂಡಿರಲಿಲ್ಲ. ದಾಖಲೆ ನೋಡದೇ ಗುನ್ನಾ ಸ್ಥಳದ ಚಕ್ಕುಬಂಧಿ ಹೇಳಲು ಬರುವುದಿಲ್ಲ. ಈಗ ಟೆಟ್ರಾ ಪ್ಯಾಕೆಟುಗಳ ತಯಾರಿಕಾ ದಿನಾಂಕವನ್ನು ಕಂಟಸ್ಥವಾಗಿ ಹೇಳಲು ಬರುವುದಿಲ್ಲ. ಅದೇ ರೀತಿ ಬ್ಯಾಚ್ ನಂ ಕೂಡ ಹೇಳಲು ಬರುವುದಿಲ್ಲ. ನಾನು ದಾಳಿ ಮಾಡಿಲ್ಲ, ಸ್ಥಳಕ್ಕೆ ಹೋಗಿಲ್ಲ ಮತ್ತು ಆರೋಪಿಯ ಕಡೆಯಿಂದ ಯಾವುದೇ ಮದವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾಲಿಗೂ ಮತ್ತು ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಇಲಾಖ ಅಂಕಿ-ಸಂಖ್ಯೆ ಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***